http://www.howtoexam.com

A 211

# ಎರಡನೆಯ ಬಿ.ಎ. ಪರೀಕ್ಷೆ, ಮೇ/ಜೂನ್ 2010
## (Revised SIM Scheme)
## ಐಚ್ಛಿಕ ಕನ್ನಡ : ಪತ್ರಿಕೆ – ೨
## (ಹರಿಶ್ಚಂದ್ರ ಕಾವ್ಯ ಸಂಗ್ರಹ, ಕುವೆಂಪು ಆಯ್ದ ಕವನಗಳು, ಗೆಲಿಲಿಯೋ)

ಸಮಯ : 3 ಗಂಟೆಗಳು — ಗರಿಷ್ಠಾಂಕ : 90

### ಎ – ವಿಭಾಗ

1. ಯಾವ ಪದ್ಯವನ್ನು ಬಿಡದೆ **ಎರಡರ** ಭಾವವನ್ನು ಸಂದರ್ಭಸಹಿತ ವಿವರಿಸಿ : **(5×2=10)**

1.1) ಪುರದ ಪುಣ್ಯಂ ಪುರುಷರೂಪಿಂದೆ ಪೋಗುತಿದೆ
ಪರಿಜನದ ಭಾಗ್ಯವಡವಿಗೆ ನಡೆಯುತಿದೆ ಸಪ್ತ
ಶರಧಿಪರಿವೃತಧರೆಯ ಸಿರಿಯೆ ಸೊಬಗಜ್ಞಾತವಾಸಕ್ಕೆ ಪೋಗದತಿದೆಕೋ
ಎರೆವ ದೀನಾನಾಥರಾನಂದ ವಡಗುತಿದೆ
ವರಮುನೀಂದ್ರರ ಯಾಗರಕ್ಷೆ ಬಲವಳಿಯುತಿದೆ
ನಿರುತವೆಂದೊಂದಾಗಿ ಬಂದು ಸಂದಿಸಿನಿಂದ ಮಂದಿ ನೆಱೆಮೊಱೆಯಿಟ್ಟುದು.

1.2) ಸಿರಿಹೋದ ಮಱುಕವನು ನೆಲೆಗಟ್ಟ ಚಿಂತೆಯನು
ಪರದೇಶಮಂ ಹೊಕ್ಕನಾಚಿಕೆಯನಱಿಯದ
ನೃಮ ಮನೆಯ ತೊತ್ತಾದ ಭಂಗವನು ನಿಮ್ಮಯ್ಯಗಜ್ಞಾತವಾದಳಲನು
ನೆರೆದು ಮನೆಯವರೆಯೆ ಕರಕರಿಪ ದುಃಖವನು
ತರಳ ನಿನ್ನಂ ನೋಡಿ ಮಱೆದು ಪರಿಣಾಮವಂ
ಧರಿಸುತಿಪ್ಪೆನ್ನ ಗೋಣಂ ಕೊಯ್ದ ಇನ್ನಾರ ನೋಡಿ ಮಱೆದ ಪೆನೆಂದಳು.

1.3) ರವಿವದನವೆ ಶಿವಸದನವೊ
ಬರಿ ಕಣ್ಣದು ಮಣ್ಣೊ !
ಶಿವನಿಲ್ಲದೆ ಸೌಂದರ್ಯವೆ ?
ಶವಮುಖದಾ ಕಣ್ಣೊ !

ಪು.ತಿ.ನೋ.

Career suggestion, Job opening college university and school information

http://www.howtoexam.com



1.4) ಶತಮಾನಗಳು ಬರಿಯ ಜಡಶಿಲೆಯ ಪೂಜಿಸಾಯ್ತು
ಪಾವ್ಗಳಿಗೆ ಪಾಲೆರೆದು ಪೋಷಿಸಾಯ್ತು !
ಬಿಸಿಲು ಮಳೆ ಗಾಳಿ ಬೆಂಕಿಯನೆಲ್ಲ ಬೇಡಿಯಾಯ್ತು
ದಾಸರನು ಪೂಜಿಸಿಯೆ ದಾಸ್ಯವಾಯ್ತು.

2\. 2.1) **ಎಂಟು** ಪದಗಳಿಗೆ ಅರ್ಥ ಬರೆಯಿರಿ : **(½×8=4)**

ಅಗ್ಗ, ಅಣಲ್, ಉರ್ವಿ, ಬಟ್ಟಜೆ, ಮೀಹ, ಹಗ್ಗಿ, ಅಭ್ರ, ವೇದಿ, ವಿಪಿನ, ಇಕ್ಷು, ಕುರುಳ್, ಶಿವೆ

2.2) **ಮೂರಕ್ಕೆ** ಟಿಪ್ಪಣಿ ಬರೆಯಿರಿ : **(2×3=6)**

ವೀರಬಾಹುಕ, ಬಹುಸುವರ್ಣಯಾಗ, ಶರತ್ಕಾಲದ ಸೂರ್ಯೋದಯದಲಿ, ಶಿಲಾಭೇರಿ, ವಸಿಷ್ಠ, ಅನಿಕೇತನ

3\. **ಐದಕ್ಕೆ** ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ಬರೆಯಿರಿ : **(2×5=10)**

(ಪ್ರತಿ ಪಠ್ಯದಿಂದ **ಎರಡಕ್ಕಿಂತ** ಹೆಚ್ಚು ಉತ್ತರಿಸಬಾರದು)

3.1) ಮೂಗನಿತ್ತು ಕನ್ನಡಿಯ ನೋಡುವರೆ

3.2) ಸೀಗೆಯೊಳಗಣ ಬಾಳೆಗೆಣೆಯಾದುದು

3.3) ನಾಯ್ಗೆ ಹಾಲುಳ್ಳೊಡಾವನೂಟಕ್ಕೆ ಯೋಗ್ಯಂ

3.4) ಧ್ಯಾನಿಗುದ್ಯಾನ ಶ್ರೀ ಕೃಷ್ಣ ಸಂಭವಕ್ಕೊಡ್ಡಿರುವಯೋಗ ಸಂದರ್ಭ !

3.5) ಕನಸೊಡೆದೆದ್ದೆ; ಇನ್ನೆಲ್ಲಿಯ ನಿದ್ದೆ

3.6) ಮೊನ್ನೆ ಮೊನ್ನೆಯವರೆಗೆ ಪಶ್ಚಿಮದ ಹೊಲಗೇರಿ

3.7) ಕಂದನಲಿ ಶಿವನ ಕಾಣುವ ಬಂಧನವೆ ಮುಕ್ತಿ

3.8) ಸೂರ್ಯನೇ ನಿಂತಿದೆ, ಭೂಮಿ ಸುತ್ತುತ್ತಿದೆ ಅವಳೇ ತಿರಿಗಾಲಿ

3.9) ಖಗೋಳಶಾಸ್ತ್ರದ ಬಗ್ಗೆ ಜನ ಬೀದಿ ಬೀದಿಯಲ್ಲಿ ಚರ್ಚೆ ಮಾಡೋ ಕಾಲ ಬರುತ್ತೆ

3.10) ಗೆದ್ದೋನು ನಾನಲ್ಲ; ಸತ್ಯ ಗೆದ್ದಿತು.

## ಬಿ – ವಿಭಾಗ

4\. 4.1) ಕಾಡ್ಗಿಚ್ಚಿನ ಪ್ರಕರಣ 'ಹರಿಶ್ಚಂದ್ರ ಕಾವ್ಯ'ಕ್ಕೆ ಅನಿವಾರ್ಯವಾಗಿತ್ತೆ ? ಚರ್ಚಿಸಿ. **10**

**ಅಥವಾ**

ಚಂದ್ರಮತಿಯ ಶೋಕ ಸನ್ನಿವೇಶವನ್ನು ಕವಿ ಹೇಗೆ ಹೃದಯಸ್ಪರ್ಶಿಯಾಗಿ ಚಿತ್ರಿಸಿದ್ದಾನೆ ?

Career suggestion, Job opening college university and school information

http://www.howtoexam.com



4.2) **ಒಂದನ್ನು** ಕುರಿತು ಬರೆಯಿರಿ : 5

1) ಗಾನರಾಣಿಯರ ಮೋಹಜಾಲ

2) ಶ್ಮಶಾನದಲ್ಲಿ ಹರಿಶ್ಚಂದ್ರ.

5. 5.1) ಕುವೆಂಪುರವರ ಪ್ರೇಮಗೀತೆಗಳನ್ನು ಕುರಿತು ಬರೆಯಿರಿ. 10

**ಅಥವಾ**

'ಕಲ್ಕಿ' ಕವನದಲ್ಲಿ ಕವಿಕಂಡ ಕನಸನ್ನು ಅನಾವರಣಗೊಳಿಸಿ.

5.2) **ಎರಡನ್ನು** ಕುರಿತು ಬರೆಯಿರಿ : **(5×2=10)**

1) ರೈತನ ದೃಷ್ಟಿ

2) 'ಶ್ರೀ ಸಾಮಾನ್ಯ' ದೀಕ್ಷಾಗೀತೆ

3) ಜೀವ ರಥೋತ್ಸವ

4) ತನುವು ನಿನ್ನದು.

**ಸಿ – ವಿಭಾಗ**

6. 6.1) ಚರ್ಚ್ ಭೂ ಕೇಂದ್ರವಾದ ಮತ್ತು ಸೂರ್ಯಕೇಂದ್ರವಾದ ಇವುಗಳ ನಡುವಿನ ಸಂಬಂಧ ವಿರೋಧಾಭಾಸಗಳೇನು ? 10

**ಅಥವಾ**

ಗೆಲಿಲಿಯೋ ಸ್ವಾಗ್ರೆಡೋ ನಡುವಿನ ಸಂಭಾಷಣೆ.

6.2) **ಎರಡನ್ನು** ಕುರಿತು ಬರೆಯಿರಿ : **(5×2=10)**

1) ಧರ್ಮ ಮತ್ತು ವಿಜ್ಞಾನ

2) ಮತಾಂಧ ಚರ್ಚ್

3) ವರ್ಜೀನಿಯಾ

4) ಟಾಲೆಮಿ ಸಿದ್ಧಾಂತ

7. **ಎರಡಕ್ಕೆ** ಟಿಪ್ಪಣಿ ಬರೆಯಿರಿ : **(2½×2=5)**

1) ಆಂಡ್ರಿಯಾ

2) ಪ್ರಾಕ್ಯುರೇಟರ್

3) ಚಿಕ್ಕ ಪ್ರಾದಿ

4) ಮಿಸೆಸ್ ಸಾರ್ತಿ.

———————————

Career suggestion, Job opening college university and school information